ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:1751/2022

ಚಾಸಾ:9 ಪ್ರಾಸಾ:5

ದಿನಾಂಕ: 27.11.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಜಾಫರ್ ಸಾಧೀಕ್ |
| ತಂದೆಯ ಹೆಸರು | : | ಶೇಖ್ ಮೊಹಿದ್ದೀನ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಕಾವ್ರಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯ ಪರಿಚಯವಿಲ್ಲ. ಸಾಕ್ಷಿಗೆ ನಿಪಿ-3ರ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ಸಾಕ್ಷಿ ನಿಪಿ-7 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಮುಮಾ1 ರಿಂದ 3ನ್ನು ನೋಡಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ:09-05-2022 ರಂದು ಪೊಲೀಸರು ಆರೋಪಿಯೊಂದಿಗೆ ಸ್ಥಳಕ್ಕೆ ಬಂದಿದ್ದು ನಾನು ಮತ್ತು ಚಾಸಾ-8 ರವರು ಸ್ಥಳದಲ್ಲಿ ಹಾಜರು ಇದ್ದು, ಪೊಲೀಸರು ಪಂಚನಾಮೆಯನ್ನು 11 ರಿಂದ 12 ಗಂಟೆಯವರೆಗೂ ಜರುಗಿಸಿ ಮುಮಾ1 ರಿಂದ 3ನ್ನು ವಶಕ್ಕೆ ಪಡೆದು ನಿಪಿ-2 ರ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ಕ್ರಮವನ್ನು ನನ್ನ ಸಮಕ್ಷಮ ಜರುಗಿಸಿದ್ದರೂ ಆರೋಪಿ ನನ್ನ ಪರಿಚಯಸ್ಥರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**